**ದಿಃ 24-3-2023 ಸಲ್ಲಿಸಿದ ಮಧ್ಯಂತರ ಅರ್ಜಿ ಮೇಲೆ ಆದೇಶ**

1. ಅರ್ಜಿದಾರ /3 ನೇ ಪ್ರತಿವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಪಿಡಬ್ಲ್ಯೂ 1 ರವರಿಗೆ 3 ನೇ ಪ್ರತಿವಾದಿ ಪರ ಪಾಟೀಸವಾಲು ಇಲ್ಲವೆಂದು ಮಾಡಿದ ಆದೇಶವನ್ನು ತೆಗೆದುಹಾಕಿ ಪಾಟೀಸವಾಲಿಗೆ ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಮಾನಹಾನಿ ಕುರಿತಾಗಿ ನಷ್ಟಭರ್ತಿ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಪ್ರತ್ಯೇಕ ಪ್ರತಿವಾದಪತ್ರವನ್ನು ಸಲ್ಲಿಸಿದ್ದು, 3 ನೇ ಪ್ರತಿವಾದಿಯು ಸಹ ಪ್ರತ್ಯೇಕ ಪ್ರತಿವಾದಪತ್ರ ಸಲ್ಲಿಸಿರುತ್ತಾರೆ. ಸದರಿ ಪ್ರತಿವಾದಪತ್ರದ ಆಧಾರದ ಮೇಲಿಂದ ವಾದಿ ಪರ ನೀಡಿದ ಸಾಕ್ಷಿದಾರನಿಗೆ ಪಾಟೀಸವಾಲಿಗೆ ಒಳಪಡಿಸುವುದು ಅತೀ ಅವಶ್ಯವಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರ ಪರ ಪಾಟೀಸವಾಲು ಮಾಡಿದ ನಂತರ 3 ನೇ ಪ್ರತಿವಾದಿ ಪರ ಪಾಟೀಸವಾಲು ಮಾಡಲು ಅವಕಾಶವಿರುತ್ತದೆಂದು ತಿಳಿದಾಗ, ಸದರಿ 1 ಮತ್ತು 2 ನೇ ಪ್ರತಿವಾದಿಯರು ಪಾಟೀಸವಾಲು ಮಾಡದೇ ಇರುವುದರಿಂದ ಎಲ್ಲರ ಪಾಟೀಸವಾಲು ಇರುವುದಿಲ್ಲವೆಂದು ತೆಗೆದುಕೊಂಡಿದ್ದಿರುತ್ತದೆ. ಒಂದು ವೇಳೆ ಪಾಟೀಸವಾಲಿಗೆ ಅನುಮತಿ ನೀಡಿದ್ದರೆ 3 ನೇ ಪ್ರತಿವಾದಿಗೆ

ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ. ಕಾರಣ ಅರ್ಜಿಯಲ್ಲಿ ಕೇಳಿದಂತೆ ವಿನಂತಿಸಿರುತ್ತಾರೆ.

**3.** ಸದರಿ ಅರ್ಜಿಗೆ ವಾದಿ ಪರ ತಕರಾರು ಸಲ್ಲಿಸಿ, ಪಾಟೀಸವಾಲಿಗಾಗಿ ಸಾಕಷ್ಟು ಅವಕಾಶ ನೀಡಿದ್ದರೂ ಸಹ ಪಿಡಬ್ಲ್ಯೂ –1 ರವರನ್ನು ಪಾಟೀಸವಾಲಿಗೆ ಒಳಪಡಿಸದೇ ಈ ಹಂತದಲ್ಲಿ ಸಲ್ಲಿಸಿದ ಅರ್ಜಿ ನ್ಯಾಯಾಲಯದ ಅತ್ಯಮೂಲ್ಯ ಸಮಯವನ್ನು ಹಾಳು ಮಾಡಿದಂತೆ, ಪಿಡಬ್ಲ್ಯೂ –1 ರವರು ಹಿರಿಯ ನಾಗರಿಕನಿದ್ದು, ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದರೂ ನ್ಯಾಯಾಲಯಕ್ಕೆ ಪ್ರತಿ ಮುದ್ದತ್ತಿಗೂ ಹಾಜರಾಗುತ್ತಿದ್ದ. ಆದರೆ 3 ನೇ ಪ್ರತಿವಾದಿಯು ಉದ್ದೇಶಪೂರ್ವಕವಾಗಿ ಪಾಟೀಸವಾಲಿಗೆ ಒಳಪಡಿಸದೇ ದಿನ ಮುಂದೂಡಿ ಪ್ರಕರಣವನ್ನು ವಾದ ವಿವಾದಕ್ಕಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿದ್ದಿರುತ್ತದೆ. ಕಾರಣ ಆರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**4.** ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ , ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ........

**ಅಂಶಗಳು**

1. ಮಧ್ಯಂತರ ಅರ್ಜಿ ಮೇಲೆ ಕೇಳಿದ ಪರಿಹಾರ ಪಡೆಯಲು 3 ನೇ ಪ್ರತಿವಾದಿ ಅರ್ಹನಿರುತ್ತಾನೆಯೇ?

2. ಯಾವ ಆದೇಶ ?

**5.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

**6.** **ಅಂಶ ನಂ.1**:- ದಿಃ 3-10-2016 ರಂದು ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟಿಸಿದ ಸಂಗತಿ ಸುಳ್ಳಿನಿಂದ ಕೂಡಿರುತ್ತದೆಂದು ಸದರಿ ಪತ್ರಿಕೆಯ ಮುಖ ಪುಟದಲ್ಲಿ ಮರು ಮುದ್ರಣಕ್ಕಾಗಿ ನಿರ್ದೇಶನಾತ್ಮಕ ಮನಾಯಿ ಹಾಗೂ ರೂ. 1 ಲಕ್ಷ ನಷ್ಟಭರಣ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ವಾದಿ ಪಿಡಬ್ಲ್ಯೂ -1 ಎಂದು ಸಾಕ್ಷಿ ನುಡಿದ ನಂತರ ಪಾಟೀಸವಾಲಿಗೆ ನೇಮಿಸಿದಾಗ ಪ್ರತಿವಾದಿಯರು ಕಾಲಾವಕಾಶ ಕೇಳಿದ್ದು, 2 ನೇ ಪ್ರತಿವಾದಿ ಪರ ಪಾಟೀಸವಾಲಿಗಾಗಿ ಕಾಲಾವಕಾಶ ಕೇಳಿದ್ದು, ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ಪಾಟೀಸವಾಲಿಗೊಳಪಡಿಸದೇ ಇರುವುದರಿಂದ ಆ ಕುರಿತು ಆದೇಶಿಸಲಾಗಿದೆ. 3 ನೇ ಪ್ರತಿವಾದಿ ಪ್ರತ್ಯೇಕ ಪ್ರತಿವಾದಪತ್ರ ಸಲ್ಲಿಸಿರುವುದರಿಂದ ಆತನ ಪರವಾಗಿಯೂ ಸಹ ಕಾಲಾವಕಾಶ ನೀಡಿದ್ದು, ಪಿಡಬ್ಲ್ಯೂ-1 ರವರನ್ನು ಪಾಟೀಸವಾಲಿಗೆ ಒಳಪಡಿಸಿರುವುದಿಲ್ಲ.

7. ದಾವೆಯ ಪಕ್ಷಗಾರರು ತಮ್ಮ-ತಮ್ಮ ನಿಲುವುಗಳನ್ನು ಸಾಬೀತಪಡಿಸಿಕೊಳ್ಳಲು ಪೂರಕ ಸಾಕ್ಷ್ಯಾಧಾರ ನೀಡಲು ಸ್ವತಂತ್ರವಿರುತ್ತಾರೆ. ದಾವೆಯ ವಿಷಯವಸ್ತು ನಿರ್ಧರಿಸಲು ಬೇಕಾದ ಅವಶ್ಯಕ ಸಾಕ್ಷ್ಯಾಧಾರವನ್ನು ನೀಡಲು ದಾವೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅನುಮತಿಸಲು ಅವಕಾಶವಿರುತ್ತದೆ. ಕಾರಣ ಸದರಿ ಪಿಡಬ್ಲ್ಯೂ -1 ರವರನ್ನು ಪಾಟೀಸವಾಲಿಗೆ ಒಳಪಡಿಸಿದರೆ ದಾವೆಯನ್ನು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಅನುಕೂಲವಾಗುತ್ತದೆ. ಕಾರಣ ತಡವಾಗಿ ಅರ್ಜಿ ಸಲ್ಲಿಸಿದ್ದನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ವಾದಿಯ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಆದ್ದರಿಂದ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

8. **ಅಂಶ ನಂ.2ಃ** ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

## ಆದೇಶ

ಮಧ್ಯಂತರ ಅರ್ಜಿ ನಂ. 6 ನ್ನು ರೂ. 200/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ಪಿಡಬ್ಲ್ಯೂ-1 ರವರ ಪಾಟೀಸವಾಲಿಗಾಗಿ ಪ್ರಕರಣವನ್ನು ದಿಃ 23-5-2023 ರಂದು ಕರೆಯಿರಿ.

sd/-

**ದಿವಾಣಿ ನ್ಯಾಯಾಲಯ , ಅಂಕೋಲಾ**